ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇನು ಕೆಲವು ಪದಗಳನ್ನು ಬಳಕೆ ಮಾಡಿದ್ದಾರೆ. ಅವು not in good taste. ಶ್ರೀಮತಿ ಸೋನಿಯಾಗಾಂಧಿಯವರ ಬಗ್ಗೆ ಏನು ಪದ ಬಳಕೆ ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ. ತಾವೇನು ತೀರ್ಮಾನ ತೆಗೆದುಕೊಳ್ಳುತ್ತೀರಿ ಅದಕ್ಕೆ ನಾನು ಬದ್ಧನಾಗಿದ್ದೇನೆ, ನೀವು ಸುಪ್ರೀಮ್, ಅದರ ಬಗ್ಗೆ ಎರಡು ಮಾತಿಲ್ಲ. ನಿಮ್ಮ ಕೊಠಡಿಗೆ ಹೋಗಿ ಅದನ್ನು ನೋಡಿ ನಾವು ಯಾವ ಕಾಂಟೆಸ್ಟ್‌ನಲ್ಲಿ ಹೇಳಿದ್ದೇವೆ ನೋಡಿ, ಹಿಂದೆ ದಾಖಲೆಗಳು ಇದ್ದಾವೆ, ಅನಂತರ ತಾವು ಏನು ಹೇಳುತ್ತೀರೋ ಅದಕ್ಕೆ ನಾನು ತಲೆಬಾಗುತ್ತೇನೆ. That is all my request. ಅವಸರ ಬೇಡ, ನೀವು ನೋಡಿ ಆಮೇಲೆ ತೀರ್ಮಾನ ತೆಗೆದುಕೊಳ್ಳಿ.

ಅಧ್ಯಕ್ಷರು : good taste ನಲ್ಲಿ ಯಾವ್ಯಾವುದು ಇಲ್ಲ ಅವೆಲ್ಲವನ್ನೂ ಕಡತದಿಂದ ನಾನು ತೆಗೆದುಹಾಕುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಮೌಢ್ಯಗಳ ಬಗ್ಗೆ ಮಾತನಾಡಿದ್ದಾರಲ್ಲಾ, ಈ ರಾಜ್ಯದಲ್ಲಿ ಡಾ. ಹೆಚ್. ನರಸಿಂಹಯ್ಯನವರ ಮುಂದಾಳತ್ವದಲ್ಲಿ ಮೌಢ್ಯಗಳ ವಿರುದ್ಧ ಹೋರಾಟ ಮಾಡಿದಾಗ ಭಾರತೀಯ ಜನತಾ ಪಕ್ಷದವರು ಎಲ್ಲಿ ಹೊಗೀದ್ದರು? ಆವತ್ತು ಆ ಮೌಢ್ಯದ ವಿರುದ್ಧ ಹೋರಾಟ ಮಾಡಿದ್ದರು. ಆದರೆ ಇವತ್ತು ಇವರಿಗೆ ಇದು ಬರುತ್ತದೆ, ಅವತ್ತು ಮೌಢ್ಯಗಳು ಬರಲಿಲ್ಲವೆ? ಮಾತನಾಡುವುದಕ್ಕೂ ಒಂದು ಇತಿಮಿತಿ ಇರಬೇಕು.

(ಆ) ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವ ಬಗ್ಗೆ

ಶ್ರೀ ಜೆ.ಸಿ. ಮಾಧುಸ್ವಾಮಿ: (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಉಪಮುಖ್ಯಮಂತ್ರಿಯವರು ಹೊರಗಡೆ ಮಾತನಾಡುವ ಸಂದರ್ಭದಲ್ಲಿ ಸಹಕಾರಿ ಸಂಘಗಳ ಸಾಲದ ಮೇಲಿರುವ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ವಜಾ ಮಾಡುತ್ತೇವೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ, ಅದನ್ನು ಬಜೆಟ್ ಅಧಿವೇಶನದಲ್ಲಿ ಮಾಡುತ್ತೇವೆಂದು ಮಾತನಾಡಿದ್ದಾರೆ, ಇದುವರೆಗೆ ಸರ್ಕಾರದ ಒಂದು ಸುತ್ತೋಲೆ ಇತ್ತು, ಯಾವುದೇ ಸಹಕಾರಿ ಸಂಘದ ಸಾಲ ಮತ್ತು ಭೂ ಅಭಿವೃದ್ಧಿ ಬ್ಯಾಂಕ್‌ನ ಸಾಲವನ್ನು ವಸೂಲಿ ಮಾಡಬೇಕಾದರೆ ಜಪ್ತಿ ಮಾಡುವುದಾಗಲಿ, ಹರಾಜು ಮಾಡುವುದಾಗಲಿ ನಿಷೇಧವಾಗಿತ್ತು. ಆದರೆ ಈಗ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಒಂದು ಕಾಗದವನ್ನು ಬರೆದು ಸಹಕಾರ ಸಂಘಗಳಿಗೆ ಆ ನಿಬಂದನೆಗಳೇನಿತ್ತು ಅದನ್ನು ವಿತ್‌ಡ್ರಾ ಮಾಡಿಕೊಂಡು ಎಲ್ಲಾ ಪಿಎಲ್‌ಡಿ ಬ್ಯಾಂಕ್‌ನವರು ಹರಾಜಿಗೆ ಇಸ್ತಿಯಾರ್‌ನ್ನು ಇಶ್ಯೂ ಮಾಡಿದ್ದಾರೆ. ಸೋಮವಾರದಿಂದ ಹರಾಜನ್ನು ನಿಗದಿ ಮಾಡಿಕೊಂಡು ಬಂದಿದ್ದಾರೆ. ಒಂದು ಕಡೆ ಬರಗಾಲ ಬಂದು ಜನರು ಬೇಗೆಯಲ್ಲಿದ್ದಾರೆ, ಇನ್ನೊಂದು ಕಡೆ ಮುಂದಿನ ಅಧಿವೇಶನದಲ್ಲಿ ಇದನ್ನು ಪರಿಶೀಲನೆ ಮಾಡುತ್ತೇನೆಂಬ ತಮ್ಮ ಹೇಳಿಕೆ ಇದೆ. ದಯಮಾಡಿ ಒಂದು ಆದೇಶ ಹೊರಡಿಸಬೇಕು, ನೀವು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವವರೆಗೆ ಹರಾಜು, ಜಪ್ತಿ ಮಾಡುವ ಕೃತ್ಯ ಮತ್ತು ಒತ್ತಾಯ ಮಾಡಿ ವಸೂಲಿ ಮಾಡುವ ಕೆಲಸವನ್ನು ತಾವು ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಮೊನ್ನೆ ಹಾಸನದಲ್ಲಿ ಮಾತನಾಡುವಾಗ ನಮ್ಮ ಸಮ್ಮಿಶ್ರ ಸರ್ಕಾರದ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಬಡ್ಡಿ ಮತ್ತು ಸುಸ್ತಿಬಡ್ಡಿ ಮನ್ನಾ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಸೇರಿಸಿದ್ದೇವೆ. ಅದನ್ನು ಮುಂದಿನ ಬಜೆಟ್‌ನಲ್ಲಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಮಾನ್ಯ ಮಾಧುಸ್ವಾಮಿಯವರು ನೀವು ಒಂದು ಕಡೆ ಈ ರೀತಿ ಹೇಳುತ್ತಿದ್ದೀರಿ, ಇನ್ನೊಂದು ಕಡೆ ಜಪ್ತಿ ಮಾಡಲು ಮಾಡುತ್ತಿದ್ದಾರೆ ಎಂಬ ಪ್ರಶ್ನೆಯನ್ನು ಎತ್ತಿದ್ದಾರೆ. ಆ ರೀತಿ ಇದ್ದ ಆದೇಶವನ್ನು ವಾಪಸ್ ತೆಗೆದುಕೊಂಡಿರುವುದು ನಿಜ. ಆದರೆ ನಾವು ಅಧಿಕಾರಿಗಳಿಗೆ ಯಾರು ಸಾಲ ಮರುಪಾವತಿ ಮಾಡುತ್ತಾರೆ ಅವರ ಹತ್ತಿರ ವಸೂಲಿ ಮಾಡಬೇಕು, ಆದರೆ ಬಲಾತ್ಕಾರ ಮಾಡಿ ಯಾವುದನ್ನೂ ವಸೂಲಿ ಮಾಡಬಾರದು, ಅವರ ಚರ ಮತ್ತು ಸ್ಥಿರಾಸ್ತಿಗಳನ್ನು ಜಪ್ತಿ ಮಾಡಬಾರದು ಎಂದು ಸ್ಪಷ್ಟವಾದ ಸೂಚನೆ, ನಿರ್ದೇಶನವನ್ನು ಕೊಟ್ಟಿದ್ದೇವೆ. ಒಂದು ವೇಳೆ ವಸೂಲಿ ಮಾಡುವಾಗ ಬಲಾತ್ಕಾರ ಮಾಡಿದ್ದ ಉದಾಹರಣೆಗಳು ಇದ್ದರೆ ಅದನ್ನು ಕಳುಹಿಸಿಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲಾ. ಚಿಕ್ಕನಾಯಕನಹಳ್ಳಿಯಲ್ಲಿ ಸೋಮವಾರ ಹರಾಜು ಮಾಡಿದ್ದಾರೆ. ತಾವು ಅದನ್ನು ಗಮನಿಸಬೇಕು.

ಶ್ರೀ ಸಿದ್ಧರಾಮಯ್ಯ : ಅದರ ಬಗ್ಗೆ ಸ್ಪಷ್ಟವಾಗಿ ಆ ರೀತಿ ಮಾಡಬಾರದು ಎಂದು ಎಲ್ಲಾ ಅಧಿಕಾರಿಗಳಿಗೆ ಮತ್ತೊಮ್ಮೆ ಸೂಚನೆ ಕಳುಹಿಸುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಕಲಘಟಗಿ ತಾಲ್ಲೂಕಿನಲ್ಲೂ ಹರಾಜು ಹಾಕುತ್ತಿದ್ದಾರೆ. ತಮಗೆ ಹಲವಾರು ಉದಾಹರಣೆಗಳನ್ನು ಕಳಿಸಿಕೊಡುತ್ತೇವೆ. ಈ ರೀತಿ ಬಹಳ ಕಡೆ ಆಗುತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಪಿಎಲ್‌ಡಿ ಬ್ಯಾಂಕುಗಳಲ್ಲಿ ಆಗುತ್ತಿದೆ, ಸೊಸೈಟಿಗಳಲ್ಲಿ ಆಗುತ್ತಿದೆ, ಎಲ್ಲರೂ ಹಾಕುತ್ತಿದ್ದರೆ, ಡಿಸಿಸಿ ಬ್ಯಾಂಕಿನವರು ಹಾಕುತ್ತಿದ್ದಾರೆ, ಅದನ್ನು ದಯಮಾಡಿ ನಿಲ್ಲಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ : ನಮ್ಮ ಕಲಘಟಗಿ ತಾಲ್ಲೂಕಿನಲ್ಲಾಗಿದೆ, ಧಾರವಾಡ ತಾಲ್ಲೂಕಿನಲ್ಲಾಗಿದೆ, ಬೇಕಾದರೆ ತಮಗೆ ಅದರ ಪ್ರತಿಯನ್ನು ಕಳಿಸಿಕೊಡುತ್ತೇವೆ.

ಶ್ರೀ ಸಿದ್ಧರಾಮಯ್ಯ : ಅದನ್ನು ನಿಲ್ಲಿಸಲು ಕ್ರಮ ತೆಗೆದುಕೊಳ್ಳುತ್ತೇವೆ.

(ಇ) ಹಾನಗಲ್ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾಡಾನೆಗಳ ಹಾವಳಿಯಿಂದ ಆಗಿರುವ ಅನಾಹುತದ ಬಗ್ಗೆ

ಶ್ರೀ ಸಿ.ಎಂ. ಉದಾಸಿ (ಹಾನಗಲ್) : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಅರಣ್ಯ ಸಚಿವರ ಗಮನಕ್ಕೆ ತರಬಯಸುತ್ತಿದ್ದೇನೆ. ಹಾನಗಲ್ ತಾಲ್ಲೂಕಿನಲ್ಲಿ ಕಾಡಾನೆಗಳ ಹಾವಳಿಯಿಂದ ಹಿರೇಕವಚಿ ಗ್ರಾಮದಲ್ಲಿ ಒಬ್ಬ ಮೃತಪಟ್ಟಿದ್ದು ಮತ್ತೊಬ್ಬ ಗಾಯಗೊಂಡಿದ್ದಾನೆ. ಇದಲ್ಲದೆ ಪದೇ ಪದೆ ರೈತರ ಜಮೀನುಗಳಲ್ಲಿ 18 ಆನೆಗಳ ಹಾವಳಿಯಿಂದ ಅಲ್ಲಿ ಸಾಕಷ್ಟು ಆಸ್ತಿಪಾಸ್ತಿ ಹಾನಿಗೆ ಒಳಗಾಗಿದೆ, ಜೀವಭಯ ಉಂಟಾಗಿದೆ, ಬೆದರಿಕೆ ಇರುವುದರಿಂದ ಸರ್ಕಾರ ತಕ್ಷಣ ಅದಕ್ಕೆ ಕ್ರಮ ತೆಗೆದುಕೊಂಡು ಆನೆಗಳನ್ನು ಹಿಡಿಯುವಂಥ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.